ತಾರತಮ್ಯದ ಪಡಿತರ ಆಹಾರ ಪದಾರ್ಥಗಳಂ

೩೮೦. ಶ್ರೀ ಆರ್.ಜಿ. ಬಾಬಾಗೌಡ ಪಾಟೀಲ್ (ಕಿತ್ತೂರು).—ಮಾನ್ಯ ಆಹಾರ ಮಂತ್ರಿ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪಡಿತರ ಆಹಾರ ಪದಾರ್ಥಗಳನ್ನು ಹಂಚಲು ಗ್ರಾಮಾಂತರ ಪ್ರದೇಶದ ಜನರಿಗೆ ಒಂದು ನೀತಿ ಪಟ್ಟಣದ ಜನರಿಗೆ ಒಂದು ನೀತಿ ಅನುಸರಿಸಲು ಕಾರಣಗಳೇನು ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಪಟ್ಟಣ ಪ್ರದೇಶಗಳಲ್ಲಿ ಆಹಾರ ಪದಾರ್ಥಗಳನ್ನು ಬೆಳೆಯದಿರುವುದರಿಂದ ಹಾಗೂ ಮಹಾನಗರಗಳಲ್ಲಿ ಮುಕ್ತ ಮಾರುಕಟ್ಟೆಯ ಧಾರಣೆಯು ಗ್ರಾಮಾಂತರ ಪ್ರದೇಶಗಳಿಗಿಂತ ಹೆಚ್ಚಾಗಿರುವುದರಿಂದ ಮತ್ತು ಗ್ರಾಹಕರ ಕೇಂದ್ರೀಕರಣವು ಗ್ರಾಮಾಂತರ ಪ್ರದೇಶಗಳಿಗಿಂತ ಜಾಸ್ತಿ ಇರುವುದರಿಂದ ಮೊದಲಿನಿಂದಲೂ ಪಟ್ಟಣ ಪ್ರದೇಶಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಪಡಿತರ ವ್ಯವಸ್ಥೆಯಲ್ಲಿ ನೀಡುತ್ತಿರುವುದನ್ನು ಮುಂದುವರಿಸಿಕೊಂಡು ಬಂದಿದೆ. ಕೇಂದ್ರ ಸರ್ಕಾರದಿಂದ ಹೆಚ್ಚಿನ ದಾಸ್ತಾನು ಬಿಡುಗಡೆ ಮಾಡಿದಾಗ ಗ್ರಾಮಾಂತರ ಪ್ರದೇಶಗಳಿಗೂ ಹೆಚ್ಚಿನ ಪ್ರಮಾಣದ ಪಡಿತರ ವಿತರಣೆ ಮಾಡಲಾಗುತ್ತಿದೆ.

೧೨-೦೦ ಮಧ್ಯಾಹ್ನ

ಶ್ರೀ ಆರ್. ಜಿ. ಬಾಬಾಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ ಸಕ್ಕರೆ ಮತ್ತು ಆಹಾರ ಪದಾರ್ಥಗಳ ಬೆಲೆಗಳು ಹಳ್ಳಿಗಾಡು ಪ್ರದೇಶಗಳಲ್ಲಿ ಹೆಚ್ಚು ಇದೆಯೋ ಅಥವಾ ಪಟ್ಟಣ ಪ್ರದೇಶಗಳಲ್ಲಿ ಹೆಚ್ಚು ಇದೆಯೋ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಕೆ.ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರೀನ್ ಕಾರ್ಡ್ ವ್ಯವಸ್ಥೆ ಇದೆ.

ಶ್ರೀ ಬಾಬಾಗೌಡ ಪಾಟೀಲ್.—ಪಡಿತರ ಪದ್ಧತಿಯ ಮೂಲಕ ಸಕ್ಕರೆ ಹಂಚುತ್ತಿದ್ದೀರಿ. ಇದರ ಬೆಲೆ ಹಳ್ಳಿಗಲ್ಲಿ ಹೆಚ್ಚೋ ಅಥವಾ ಪಟ್ಟಣಗಳಲ್ಲಿ ಹೆಚ್ಚೋ ?

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ಜನ ಹೆಚ್ಚು ಸಕ್ಕರೆ ಉಪಯೋಗ ಮಾಡುತ್ತಾರೆ, ಮತ್ತು ಹಳ್ಳಿಗಳಲ್ಲಿ ಇರುವಂತಹ ಜನ ಬೆಲ್ಲ ಹೆಚ್ಚು ಉಪಯೋಗ ಮಾಡುತ್ತಾರೆ. ಇದರಿಂದ ಪಟ್ಟಣ ಪ್ರದೇಶಗಳಲ್ಲಿ ಸಕ್ಕರೆ ಬೆಲೆ ಯಾವಾಗಲೂ ಸ್ವಲ್ಪ ಹೆಚ್ಚು ಇರುತ್ತದೆ.

ಶ್ರೀ ಬಾಬಾಗೌಡ ಪಾಟೀಲ್.—ಪಟ್ಟಣ ಪ್ರದೇಶಗಳಿಗೆ ತಾವು ಹೆಚ್ಚು ಸಕ್ಕರೆ ಕೊಡುತ್ತೀರಿ ? ಹಳ್ಳಿಗಳ ರೈತ ಕಬ್ಬು ಬೆಳೆದರೂ ಆತನಿಗೆ ಕಡಿಮೆ ಸಕ್ಕರೆ ಕೊಡುತ್ತೀರಿ, ಇದಕ್ಕೆ ಕಾರಣವೇನು ?

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಏನೆಂದರೆ ಹಳ್ಳಿಗಳಲ್ಲಿ ಸಕ್ಕರೆ ಉಪಯೋಗ ಮಾಡುವುದು ಕಡಿಮೆ. ಪಟ್ಟಣ ಪ್ರದೇಶಗಳಲ್ಲಿ ಸಕ್ಕರೆ ಉಪಯೋಗ ಮಾಡುವುದು ಜಾಸ್ತಿ ಎಂದು.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ ಈ ಪಡಿತರ ವ್ಯವಸ್ಥೆ ಏನು ಇದೆ, ಇದರಿ ಹಳ್ಳಿಗಾಡು ಪ್ರದೇಶಗಳಿಗೆ ಒಂದು ನೀತಿ ಇದೆ, ಪಟ್ಟಣ ಪ್ರದೇಶಗಳಿಗೆ ಒಂದು ನೀತಿ ಇದೆ ನಗರ ಪ್ರದೇಶಗಳಿಗೆ ಜಾಸ್ತಿ ಸಕ್ಕರೆ ಕೊಡುತ್ತೀರಿ. ಅಕ್ಕಿ ಜಾಸ್ತಿ ಕೊಡುತ್ತೀರಿ. ಅದೇ ಗ್ರಾಮಾಂತರ ಪ್ರದೇಶಗಳಲ್ಲಿರುವವರಿಗೆ ಅದರಲ್ಲಿ ಅರ್ಧ ಕೊಡುತ್ತೀರಿ ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಜನ ಬಹಳ ನೊಂದುಕೊಂಡಿದ್ದಾರೆ. ಪಟ್ಟಣದಲ್ಲಿರುವವರಿಗೆ ಜಾಸ್ತಿ ಕೊಡುತ್ತಾರೆ ನಮಗೆ ಕೊಡುವುದಿಲ್ಲ ಇದಕ್ಕೆ ಕಾರಣವೇನು ಎಂದು ಅವರು ನಮ್ಮನ್ನು ಕೇಳುತ್ತಾರೆ. ಪಟ್ಟಣ ಪ್ರದೇಶಗಳಲ್ಲಿ ಹೆಚ್ಚು ಸಕ್ಕರೆ ಉಪಯೋಗ ಮಾಡುತ್ತಾರೆಂದು ಈಗ ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಕಾಫಿ ಹೋಟೆಲ್ಸ್ ಪಟ್ಟಣ ಪ್ರದೇಶಗಳಲ್ಲಿ ಜಾಸ್ತಿ ಇರುತ್ತವೆ. ಆದರೆ ಹಳ್ಳಿಗಾಡು ಪ್ರದೇಶಗಳಲ್ಲಿ ಅವರ ಸಂಬಂಧಿಕರು ಹಾಗೂ ನೆಂಟರಿಷ್ಟರು ಬರುವುದರಿಂದ ನಮಗೂ ಪಟ್ಟಣ ಪ್ರದೇಶದಷ್ಟೇ ಸಕ್ಕರೆ ಕೊಡಬೇಕು ಎಂದು ಕೇಳುತ್ತಿದ್ದಾರೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಿಗೂ ಪಟ್ಟಣ ಪ್ರದೇಶಗಳಿಗೂ ಒಂದೇ ರೀತಿಯ ಪಡಿತರ ವ್ಯವಸ್ಥೆ ಇರುವಂತೆ ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಏನಾದರೂ ಯೋಜನೆ ಮಾಡುತ್ತಾರೆಯೇ ?

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ಈ ಒಂದು ಪಡಿತರ ನೀತಿ ಸುಮಾರು ೪೦ ವರ್ಷಗಳಿಂದ ನಡೆದುಕೊಂಡು ಬಂದಿದೆ. ಗ್ರಾಮಾಂತರ ಪ್ರದೇಶದ ಜನ ಹೆಚ್ಚು ಕಬ್ಬು ಬೆಳೆಯುತ್ತಾರೆ. ಹೆಚ್ಚು ಧಾನ್ಯಗಳನ್ನು ಬೆಳೆಯುತ್ತಾರೆ. ಅವರು ಕೂಲಿಗೆ ಧಾನ್ಯ ಕೊಡುವಂತಹ ಪದ್ಧತಿ ಇದೆ. ನಾನು ಮೊದಲೇ ಹೇಳಿದಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಬೆಲ್ಲ ಉಪಯೋಗಿಸುತ್ತಾರೆ. ಆದರೂ ನಾವು ಕೇಂದ್ರ ಸರ್ಕಾರದ ಗಮನಕ್ಕೆ ಈ ವಿಷಯವನ್ನು ತಂದು ನಾವು ಇನ್ನು ಹೆಚ್ಚಿಗೆ ಅಲಾಟ್ ಮಾಡಿ ಎಂದು ಕೇಳಿಕೊಳ್ಳುತ್ತೇವೆ. ಆ ಅಲಾಟ್‌ಮೆಂಟ್ ಬಂದ ಕೂಡಲೇ ಗ್ರಾಮಾಂತರ ಪ್ರದೇಶಗಳಿಗೂ ಹೆಚ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

SRI R. V. DESHPANDE.—Informal rationing is not introduced all over the State. ಈ ಇನ್‌ಫಾರ್ಮಲ್ ರೇಷನಿಂಗ್ ಏನಿದೆ, ಇದು ರಾಜ್ಯದಲ್ಲಿ ಕೆಲವು ಪಟ್ಟಣಗಳಿಗೆ ಮಾತ್ರ ಸೀಮಿತವಾಗಿದೆ. ಪಾಪುಲೇಶನ್ ಆಧಾರದ ಮೇಲೆ ಈ ಇನ್‌ಫಾರ್ಮಲ್ ರೇಷನಿಂಗ್ ಪದ್ಧತಿ ಇದೆ. ಇದನ್ನು ಇನ್ನೂ ಹೆಚ್ಚಿನ ಸಿಟಿಗಳಿಗೆ ವಿಸ್ತರಣೆ ಮಾಡುವ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತದೆಯೇ ?

ಶ್ರೀ ಕೆ. ಜೆ ಜಾರ್ಜ್.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದ್ದೇನೆ. ನಮಗೆ ಸುಮಾರು ೭೫ ಸಾವಿರ ಟನ್ ಆಹಾರಪದಾರ್ಥಗಳಷ್ಟು ಅಕ್ಕಿ ಬೇಕಾಗುತ್ತದೆ. ಸಕ್ಕರೆ ಸಹ ಹೆಚ್ಚು ಬೇಕಾಗುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳಲ್ಲಿ ನಾನು ಮಾನವಿ ಮಾಡಿಕೊಂಡಿದ್ದೇನೆ. ನಮಗೆ ಇನ್ನೂ ಹೆಚ್ಚು ಆಹಾರ ಪದಾರ್ಥಗಳನ್ನು ಬಿಡುಗಡೆ ಮಾಡಿ ಎಂದು. ನಮ್ಮ ವಿರೋಧಪಕ್ಷದ ಸರ್ಕಾರವೇ ಅಲ್ಲಿ ಆಡಳಿತ ನಡೆಸುತ್ತಿರುವುದರಿಂದ ಅವರು ಸಹ ಅವರ ಮಂತ್ರಿಗಳ ಮೇಲೆ ಒತ್ತಾಯ ತಂದು ಹೆಚ್ಚು ಮಾಡಿಸಿದರೆ, ನಾವು ಹೆಚ್ಚು ವಿಸ್ತರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ ಗ್ರಾಮಾಂತರ ಪ್ರದೇಶಗಳಲ್ಲಿ ಸಕ್ಕರೆ ಬಳಕೆ ಬಹಳ ಕಡಿಮೆ, ಬೆಲ್ಲ ಬಹಳ ಉಪಯೋಗಿಸುತ್ತಾರೆ ಎನ್ನುವ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದರು. ಇದಕ್ಕೆ ಆಧಾರ ಏನು ? ಈ ಬಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿ ಯಾರು ಎಷ್ಟು ಸಕ್ಕರೆ ಉಪಯೋಗಿಸುತ್ತಾರೆ, ಮತ್ತು ಯಾರು ಎಷ್ಟು ಬೆಲ್ಲ ಉಪಯೋಗ ಮಾಡುತ್ತಾರೆ ಎಂದು ಸಮೀಕ್ಷೆ ಏನಾದರೂ ಮಾಡಿದ್ದೀರೋ ಹೇಗೆ ? ಆ ಸಮೀಕ್ಷೆಯ ಆಧಾರದ ಮೇಲೆ ತಾವು ಉತ್ತರ ಕೊಡುತ್ತಿದ್ದೀರಾ ಹೇಗೆ ? ನಿಮಗೆ ಬರತಕ್ಕಂಥ ಸಕ್ಕರೆ ಪ್ರಮಾಣ ಕಡಿಮೆ ಇರುವುದರಿಂದ ಇದನ್ನು ಗ್ರಾಮಾಂತರ ಪ್ರದೇಶಗಳಿಗೆ ಕೊಟ್ಟರೂ ನಡೆಯುತ್ತದೆ ಕೊಡದಿದ್ದರೂ ನಡೆಯುತ್ತದೆ ಎನ್ನುವ ಕಾರಣದಿಂದ ತಾವು ಇಲ್ಲಿ ಏನಾದರು ಒಂದು ಉತ್ತರ ಕೊಡುತ್ತಿದ್ದೀರಾ ಹೇಗೆ ?

ಶ್ರೀ ಕೆ. ಜೆ. ಜಾರ್ಜ್.—ಇದರಲ್ಲಿ ಯಾವುದೇ ಸಮೀಕ್ಷೆ ನಡೆದಿಲ್ಲ, ಆದರೆ ಇದು ಸಾಮಾನ್ಯವಾಗಿ ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿರುವುದು. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಬೆಲ್ಲ ಉಪಯೋಗ ಮಾಡುತ್ತಾರೆ. ಶ್ರೀ ಸಿ. ಬೈರೇಗೌಡ ಹಳ್ಳಿಗರು ಸಕ್ಕರೆ ಉಪಯೋಗಿಸುತ್ತಿಲ್ಲ ಎನ್ನುವುದಕ್ಕೆ ಬೇಸಿಸ್ ಏನಿದೆ ? ಯಾವುದೇ ಬೇಸಿಸ್ ಇಲ್ಲದೆ ಅವರು ಉಪಯೋಗಿಸುವುದಿಲ್ಲವೆಂದು ಹೇಳುವುದು ಸರಿಯಲ್ಲ,

(ಉತ್ತರವಿಲ್ಲ)

ಶ್ರೀ ಕೆ. ಹೆಚ್. ಹನುಮೇಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಬೆಲ್ಲ ಹೆಚ್ಚಿಗೆ ಉಪಯೋಗಿಸುವುದರಿಂದ ಸಕ್ಕರೆ ಡಿಮ್ಯಾಂಡ್ ಅಲ್ಲಿ ಕಡಿಮೆ ಇದೆಯೆಂದು ಹೇಳಿದ್ದಾರೆ. ಆದರೆ, ಗ್ರಾಮಾಂತರದ ಪ್ರದೇಶಗಳಲ್ಲಿ ಅಡಿಗೆ ಎಣ್ಣೆಯನ್ನು ಏಕೆ ಕೊಡುತ್ತಿಲ್ಲ ? ಕೊಟ್ಟರೂ ಸಹ ಟೌನ್‌ಗಳಲ್ಲಿ ಏನು ಕೊಡುತ್ತಿರೋ ಆ ರೀತಿ ಹಳ್ಳಿಗಳ ಕಡೆ ಕೊಡುವುದಿಲ್ಲ. ಏಕೆ ಈ ತಾರತಮ್ಯ ? ಅವರು ಒಗ್ಗಟ್ಟಾಗಿ ಬಂದು ಕೇಳುವುದಿಲ್ಲವೆಂದು ಈ ತರಹ ಮಾಡುತ್ತಿದ್ದೀರಾ ? ಈ ಅನ್ಯಾಯ ಏಕೆ ?

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ಪಟ್ಟಣ ಬೇರೆ ಹಳ್ಳಿ ಬೇರೆ ಎನ್ನುವ ತಾರತಮ್ಯ ಸರ್ಕಾರಕ್ಕಿಲ್ಲ. ಎಲ್ಲರಿಗೂ ಸರಿಯಾದ ನ್ಯಾಯವನ್ನು ಒದಗಿಸಿಕೊಡಬೇಕೆನ್ನುವುದೇ ಸರ್ಕಾರದ ನೀತಿಯಾಗಿದೆ. ತಮಗೆ ಗೊತ್ತಿರುವ ಹಾಗೆ ಹಳ್ಳಿಯ ಜನರು ಕಡಲೆಕಾಯಿ ಎಣ್ಣೆ ಮತ್ತು ಬೇರೆ ಬೇರೆ ಎಣ್ಣೆಗಳನ್ನು ಉಪಯೋಗಿಸುತ್ತಾರೆ. ಮೊದಲು ನಮ್ಮ ರಾಜ್ಯಕ್ಕೆ ೨೫ ಸಾವಿರ ಲೀಟರ್ ಪಾಮ್ ಆಯಿಲ್ ಬರುತ್ತಿತ್ತು ಈಗ ೨೫೦೦ ಮಾತ್ರ ಬರುತ್ತಿದೆ. ಕೇಂದ್ರ ಸರ್ಕಾರವು ಈ ಎಣ್ಣೆಯನ್ನು ಆಮದು ಮಾಡುವುದನ್ನು ಕಡಿಮೆ ಮಾಡಿದೆ. ಆದ್ದರಿಂದ ಹೆಚ್ಚಿಗೆ ಕೊಡುವುದಕ್ಕಾಗುವುದಿಲ್ಲ. ಈಗ ಬರುವುದರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹಳ್ಳಿಗಳಿಗೂ ಕೊಡುತ್ತಿದ್ದೇವೆ.